ಶ್ರೀ ಸಿ. ಬೈರೇಗೌಡ : ಮಾನ್ಯ ಅಧ್ಯಕ್ಷಣಿಯವರೇ, ಮಾನ್ಯ ಸಚಿವರು ಕೊಟ್ಟ ಉತ್ತರ ಸಮರ್ಪಕವಾಗಿ ಇಲ್ಲ. ಇದು ಜನಸಾಮಾನ್ಯರಿಗೆ ಸಂಬಂಧಪಟ್ಟಿರತಕ್ಕಂಥ ವಿಚಾರ. ಇನು ಒಬ್ಬರ ಪ್ರಶ್ನೆಯಲ್ಲ. ಜನಸಾಮಾನ್ಯರ ಪ್ರಶ್ನೆಯಾಗಿರುವುದರಿಂದ ಅವರ ಮೇಲೆ ಕ್ರಮ ತೆಗೆದುಕೊಳ್ಳಲು ಅಡ್ಡಿ ಆತಂಕ ಏನಿದೆ. ಪರಿಶೀಲಿಸುತ್ತೇವೆಂದರೆ ಏನು ಅರ್ಥ? ಎಂಟುತಿಂಗಳಿಂದ ಒಂದು ಸಭೆ ಕೂಡ ನಡೆದಿಲ್ಲ.

ಉಪಾಧ್ಯಕ್ಷಣಿಯವರು : ತಾವು ಇವತ್ತು ಅವರ ಗಮನಕ್ಕೆ ತಂದಿದ್ದೀರಿ. ಅವರು ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ಅಡ್ಡಿ ಆತಂಕ ಏನಿದೆ, ಎಸೆನ್ಷಿಯಲ್ ಕಮಾಡೆಟೀಸ್ ಆಕ್ಟ್ ಪ್ರಕಾರ ಏನಾದರೂ ಒಂದು ಕ್ರಮ ತೆಗೆದುಕೊಳ್ಳುತ್ತೇವೆಂದು ಅದನ್ನಾದರೂ ಮಾನ್ಯ ಸಚಿವರು ಹೇಳಲಿ.

ಶ್ರೀಮತಿ ಮನೋರಮ ಮಧ್ವರಾಜ್ : ಮಾನ್ಯ ಸದಸ್ಯರು ಹೇಳಿದ ಹಾಗೆ ನಾವು ಅದಷ್ಟು ಬೇಗ ಒಂದು ಸಭೆಯನ್ನು ಕರೆದು ಚರ್ಚೆ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷಣಿಯವರೇ, ಇದನ್ನು ತೀವ್ರವಾಗಿ ತೆಗೆದುಕೊಳ್ಳಬೇಕು. ಏತಕ್ಕೆಂದರೆ ಲಕ್ಷಾಂತರ ಜನ ಹೋಟೆಲ್ ತಿಂಡಿಯನ್ನು ತಿಂದು ಜೀವನ ಮಾಡುತ್ತಿರುವವರ ಬಗ್ಗೆ ಸರ್ಕಾರಕ್ಕೆ ಕಾಳಜಿ ಇಲ್ಲವೆಂದರೆ ನಾವು ಇಲ್ಲಿ ಏತಕ್ಕೆ ಕುಳಿತಿರಬೇಕು.

ಉಪಾಧ್ಯಕ್ಷಣಿಯವರು : ಮಾನ್ಯ ಸಚಿವೆಯವರು ಅದಷ್ಟು ಜಾಗ್ರತೆ ಪರಿಶೀಲನೆ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಸಿ. ಬೈರೇಗೌಡ : ಸರ್ಕಾರ ಹೋಟೆಲ್ ಮಾಲೀಕರ ಪರವಾಗಿ ಇದೆ. ಸರ್ಕಾರ ಅವರ ಹಿತವನ್ನು ಕಾಪಾಡುವ ಪ್ರಯತ್ನ ಮಾಡುತ್ತಿದೆ. ಇದು ಹೋಟೆಲ್ ಮಾಲೀಕರ ಪರವಾಗಿ ಇರತಕ್ಕಂಥ ಸರ್ಕಾರ. ಈ ಸರ್ಕಾರಕ್ಕೆ ದಿಕ್ಕಾರಹಾಕಿ ನಾನು ಹೊರಗಡೆ ಹೋಗುತ್ತಿದ್ದೇನೆ. ಸರ್ಕಾರದ ನೀತಿಗೆ ಧಿಕ್ಕಾರ ಹಾಕಿ ನಾನು ಹೊರಗಡೆ ಹೋಗುತ್ತಿದ್ದೇನೆ.

(ಮಾನ್ಯ ಶ್ರೀ ವಾಟಾಳ್ ನಾಗರಾಜ್‌ರವರು ಮತ್ತು ಮಾನ್ಯ ಸಿ.ಬೈರೇಗೌಡರು ಸರ್ಕಾರಕ್ಕೆ ಧಿಕ್ಕಾರವೆಂದು ಕೂಗುತ್ತಾ ಸಭಾತ್ಯಾಗ ಮಾಡಿದರು)

ಪೆಟ್ರೋಲ್ ಕಲಬೆರಕೆ

48 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಪೆಟ್ರೋಲ್ ಬೆಲೆ ಏರಿಕೆಯ ತರುವಾಯ ಪೆಟ್ರೋಲ್ ಬಂಕ್‌ಗಳವರು ಪೆಟ್ರೋಲ್ ಜೊತೆಗೆ ಸೀಮೆಎಣ್ಣೆ ಬೆರೆಸುತ್ತಿರುವ ವಿಚಾರವು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಅಂತವರ ಸಂಖ್ಯೆ ಎಷ್ಟು ಹಾಗೂ ಅವರ ಮೇಲೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮಗಳೇನು?